ಆ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಅಪೂರ್ಣಗೊಂಡಿರುವ ಸೇತುವೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರದ ಕ್ರಮಗಳೇನು?

ಬೆಳ್ತಂಗಡಿ ತಾಲ್ಲೂಕಿನಲ್ಲಿ ನಬಾರ್ಡ್‌ನ ಆರ್ ಐ ಡಿ ಎಫ್–10ರ ಯೋಜನೆಯಡಿ ಪೆರ್ಮುಡೆ– ವೇಣೂರು ರಸ್ತೆಯ ಪೆರ್ಮುಡೆ ಬಳಿ 70 00 ಲಕ್ಷ ರೂ ಮೊತ್ತದಲ್ಲಿ ಕೈಗೊಳ್ಳಲಾಗಿರುವ ಸೇತುವೆ ಕಾಮಗಾರಿಯು ಪ್ರಗತಿಯಲ್ಲಿದೆ ಈ ಕಾಮಗಾರಿಯನ್ನು ಮೇ–2007ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು

ಅನುಬಂಧ–I

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**073(1500)**
ಸದಸ್ಯರ ಹೆಸರು	**ಶ್ರೀ ಅಂಗಾರ ಎಸ್ (ಸುಳ್ಯ)**
ಉತ್ತರಿಸುವ ಸಚಿವರು	**ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗ್ರಾಮಾಂತರ ಪ್ರದೇಶಗಳಾದ ಗುತ್ತಿಗಾರು, ಸಂಪಾಜೆ, ಸುಬ್ರಹ್ಮಣ್ಯ ಮತ್ತು ಸವಣೂರು ಗ್ರಾಮಗಳಿಗೆ ಸರಿಯಾದ ವಿದ್ಯುತ್ ಸಂಪರ್ಕ ಒದಗಿಸಲು 33 ಕೆ ವಿ ಸಬ್–ಸ್ಟೇಷನ್‌ನ್ನು ಹಾಗೂ ಪುತ್ತೂರಿನಿಂದ ಸುಳ್ಯಕ್ಕೆ 110 ಕೆ ವಿ ಸಬ್–ಸ್ಟೇಷನ್ ಮತ್ತು ಲೈನನ್ನು ಮಂಜೂರು ಮಾಡುವ ಪ್ರಸ್ತಾವನೆ ಅಥವಾ ಉದ್ದೇಶ ಸರ್ಕಾರದ ಮುಂದಿದೆಯೇ,

ಇದೆ

ಆ) ಇದ್ದಲ್ಲಿ, ಯಾವಾಗ ಮಾಡಲಾಗುವುದು,

ಸವಣೂರು ಗ್ರಾಮದಲ್ಲಿ ಉದ್ದೇಶಿಸಲಾಗಿರುವ 33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ಮಾತ್ರ ಈಗ ಭೂಮಿ ಲಭ್ಯವಾಗಿರುತ್ತದೆ ಗುತ್ತಿಗಾರು, ಸಂಪಾಜೆ ಮತ್ತು ಸುಬ್ರಹ್ಮಣ್ಯಗಳಲ್ಲಿ ಉದ್ದೇಶಿಸಲಾಗಿರುವ 33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರಗಳಿಗೆ ಭೂಮಿಯು ಲಭ್ಯವಾಗಬೇಕಾಗಿರುತ್ತದೆ ಅಲ್ಲದೇ, ಈ ನಾಲ್ಕೂ ಉದ್ದೇಶಿತ 33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರಗಳಿಗೆ ಸುಳ್ಯದಲ್ಲಿ ಉದ್ದೇಶಿಸಲಾಗಿರುವ 110 ಕೆ ವಿ ವಿದ್ಯುತ್ ಉಪ ಕೇಂದ್ರದಿಂದಲೇ ವಿದ್ಯುತ್ ಸರಬರಾಜಾಗಬೇಕಾಗಿರುತ್ತದೆ ನೆಟ್ಲಮಡ್ನೂರಿನಿಂದ ಸುಳ್ಯಕ್ಕೆ 110 ಕೆ ವಿ ಲೈನಿನ ನಿರ್ಮಾಣಕ್ಕೆ ಬೇಕಾದ 20 5 ಹೆಕ್ಟೇರ್ ರಕ್ಷಿತಾರಣ್ಯ ಬಿಡುಗಡೆಗೊಳಿಸಬೇಕಾಗಿದ್ದು, ಈ ಬಗ್ಗೆ ಎರಡು ಹಂತಗಳಲ್ಲಿ ಅಂದರೆ ನೆಟ್ಲಮಡ್ನೂರಿನಿಂದ ಮಾಡವು ಹಾಗೂ ಮಾಡವುನಿಂದ ಸುಳ್ಯದವರೆಗಿನ ಅರಣ್ಯ ಪ್ರದೇಶಗಳಲ್ಲಿ 110 ಕೆ ವಿ ಲೈನಿನ ನಿರ್ಮಾಣಕ್ಕೆ ಅರಣ್ಯ ಇಲಾಖೆಯ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ

ಅರಣ್ಯ ಇಲಾಖೆಯಿಂದ ಅನುಮತಿ ದೊರೆತ ನಂತರವೇ ಸುಳ್ಯದಲ್ಲಿರುವ 33 ಕೆ ವಿ ವಿದ್ಯುತ್ ಉಪ ಕೇಂದ್ರವನ್ನು 110 ಕೆ ವಿ ಗೆ ಉನ್ನತೀಕರಿಸಲು ಹಾಗೂ 110 ಕೆ ವಿ ಲೈನಿನ ಕೆಲಸಗಳಿಗೆ ಟೆಂಡರ್ ಕರೆಯಬೇಕಾಗಿರುತ್ತದೆ

ಇ) ಪ್ರಸ್ತಾವನೆ ಇಲ್ಲದಿದ್ದಲ್ಲಿ, ವಿದ್ಯುತ್ ಸಂಪರ್ಕ ಕಲ್ಪಿಸಿ ಸಮಸ್ಯೆಯನ್ನು ನೀಗಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ,

ಮೇಲಿನ ಉತ್ತರದ ಹಿನ್ನಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1074(1502)**
ಸದಸ್ಯರ ಹೆಸರು **ಶ್ರೀ ಅಂಗಾರ ಎಸ್ (ಸುಳ್ಯ)**
ಉತ್ತರಿಸುವ ಸಚಿವರು **ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)**

ಅ) ಸುಳ್ಯದ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಕಾಮಗಾರಿ ಈಗ ಯಾವ ಹಂತದಲ್ಲಿದೆ,

ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ

ಆ) ಕಾಮಗಾರಿಯ ಅಂದಾಜು ವೆಚ್ಚ ಎಷ್ಟು ಹಾಗೂ ಈ ವರೆಗೆ ವೆಚ್ಚ ಮಾಡಿರುವ ಹಣ ಎಷ್ಟು,

ಈ ಕಾಮಗಾರಿಯ ಟೆಂಡರ್ ವೆಚ್ಚ ಸೇರಿ 55 09 ಲಕ್ಷ ರೂ ಗಳು ಮತ್ತು ಈ ವರೆವಿಗೂ 51 91 ರೂ ಗಳನ್ನು ವೆಚ್ಚ ಮಾಡಲಾಗಿದೆ

ಇ) ಕಾಮಗಾರಿ ಯಾವಾಗ ಮುಕ್ತಾಯವಾಗಲಿದೆ?

2007ನೇ ಏಪ್ರಿಲ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1075(1503)**
ಸದಸ್ಯರ ಹೆಸರು **ಶ್ರೀ ಅಂಗಾರ ಎಸ್ (ಸುಳ್ಯ)**
ಉತ್ತರಿಸುವ ಸಚಿವರು **ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)**

ಅ) ಸುಳ್ಯ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಿಗೆ ಸರಿಯಾದ ಬಸ್ ಸಂಪರ್ಕ ಕಲ್ಪಿಸುವ ದೃಷ್ಟಿಯಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ಡಿಪೋ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರಕ್ಕೆ ಇದೆಯೇ,

ಹೌದು

ಆ) ಬಸ್ ಡಿಪೋ ಅಗತ್ಯತೆಯನ್ನು ಸರ್ಕಾರ ಮನಗಂಡಿದೆಯೇ,